Underground Drainage Scheme of Kolar

176. Sri C. BYRE GOWDA (Vemgal).—

Will the Minister for Municipal Administration be pleased to state.—

(*a*) when the underground drainage scheme in Kolar was started; the estimated cost of the scheme then;

(*b*) the amount spent so far and the present stage of the scheme;

(*c*) the reason for not completing the work so far;

(*d*) when the work will be completed?

Sri B. BASAVALINGAPPA (Minister for Municipal Administration).—

(*a*) The underground drainage scheme in Kolar was started in September, 1955. The estimated cost of the scheme then was Rs. 7.5 lakhs (revised estimate Rs. 9.23 lakhs).

(*b*) The amount of expenditure incurred so far is Rs. 8,50,705. Except the 12th division (daraga area) all the sanctioned divisions of the scheme are at the stage of completion.

(*c*) The main reasons for not completing the scheme so far are.—

The frequent transfer of work from one division of P. W. D. to other and the revision of estimates.

(*d*) This work will be completed by March, 1974.

ಶ್ರೀ ಸಿ. ಬೈರೇಗೌಡ.—1955ನೇ ಇಸವಿಯಲ್ಲಿ ಆರಂಭವಾದ ಸ್ಕೀಂಗಳು 1973ನೇ ಮಾರ್ಚಿಯೊಳಗೇ ಮುಗಿಸುತ್ತೇವೆಂದು ಹೇಳಿದ್ದರೂ ಇಲ್ಲಿ ಇನ್ನೂ ಸ್ವಲ್ಪ ಕೆಲಸಗಳು ಆಗಿವೆ ಇದರ ಬಗ್ಗೆ ಎನ್‌ಕ್ವೈರಿ ಯಾವಾಗ ಮಾಡಿ ಸರಿಪಡಿಸುತ್ತೀರಿ? ತಮ್ಮ ಪ್ರಶ್ನೆ ಪ್ರಕಾರ ತರೆಮೇಲೆ ಮಲ ಹೊರುವುದು ನಿಲ್ಲಿಸುವುದನ್ನು ಬರುವ ಆಗಸ್ಟ್ ತಿಂಗಳೊಳಗಾಗಿಯೇ ಜಾರಿಗೆ ತರುತ್ತೇವೆಂದು ಹೇಳಿದಿರಿ? ಆಷ್ಟರೊಳಗೆ ಇದು ಮಾಡಲು ಸಾಧ್ಯವೇ? ಆ ನಂತರ ಇದರಲ್ಲಿ (ಡಿ)ನೆ ಉತ್ತರವಾಗಿ ಈ ಕೆಲಸವನ್ನು 1974ರ ಮಾರ್ಚ್ ತಿಂಗಳೊಳಗಾಗಿ ಮುಗಿಸುತ್ತೇವೆಂದು ಹೇಳಿದ್ದೀರಿ? ಹೀಗೆ ಹೇಳುವುದು ನಿಮ್ಮ ತತ್ವಕ್ಕೆ ವಿರೋಧವಾಗುವುದಿಲ್ಲವೇ?

† ಶ್ರೀ ಬಿ. ಬಸವಲಿಂಗಪ್ಪ.—ಇದಕ್ಕೆ ಕೆಲವಾರು ಕಾರಣಗಳಿವೆ. ಮೊದಲು ಇದು ಪಿ.ಡಬ್ಲ್ಯೂ.ಡಿ. ಇಲಾಖೆಗೆ ಸೇರಿತು. ಆನಂತರ ಇದು ಪಿ.ಹೆಚ್.ಇ. ಇಲಾಖೆಗೆ ವರ್ಗವಾಯಿತು. ಆನಂತರ ಇದರ ಅಂದಾಜುಗಳು ಬದಲಾವಣೆ ಮಾಡಬೇಕಾಗಿ ಬಂತು. ಇವೆಲ್ಲ ಕಾರಣಗಳಿಂದ ಇಲ್ಲಿ ಕಾರ್ಯಕ್ರಮ ದಂತೆ ಕೆಲಸಗಳಾಗುವುದು ಸ್ವಲ್ಪ ವಿಧಾನವಾಗುತ್ತಿದೆ. ಮತ್ತು ಇದಕ್ಕೆ ಯಾರು ಕಾರಣರು ಎನ್ನುವುದನ್ನೆಲ್ಲಾ ವಿಚಾರಮಾಡಿ ಆದಷ್ಟು ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಇನ್ನು ನೈಟ್ ಸಾಯಿರ್ ಬಗ್ಗೆ ಹೇಳಿದರು. ಇದರ ಕೆಲಸಗಳು ಸುವೇಜ್ ಪೈಪುಗಳ ಜೋಡಣೆ ಇತ್ಯಾದಿ ಕೆಲಸಗಳು ಆಗಬೇಕಾಗಿರುವುದರಿಂದ ಇದು ಸ್ವಲ್ಪ ವಿಧಾನವಾಗುತ್ತದೆ. ಆಗಸ್ಟ್ 1973ರ ರೊಳಗಾಗಿ ನಿಲ್ಲಿಸುತ್ತೇವೆ ಎಂದು ಏನು ಹೇಳಿದ್ದೇವೆ. ಇದರಲ್ಲಿ ಯಾವ ತಾರತಮ್ಯವನ್ನೂ ಮಾಡಲಾಗುವುದಿಲ್ಲ ಎಲ್ಲೆಲ್ಲ ಸೂಯೇಜು ಪೈಪುಗಳಿವೆಯೋ ಅಲ್ಲಿ ಬೇಗನೆ ಕೆಲಸಗಳಾಗುತ್ತವೆ ಎಲ್ಲಿ ಸೂಯೇಜು ಪೈಪುಗಳು ಇಲ್ಲವೊ ಅಂತಹ ಕಡೆಗಳಲ್ಲಿ ಸೋಕ್ ಪಿಟ್‌ಗಳನ್ನು ಮಾಡಿಸಿ ಇದರ ಮೂಲಕ ಮಾಡಬೇಕೆಂದೂ ಇದೆ. ಒಟ್ಟಿನಲ್ಲಿ ಇದನ್ನು ನಿರ್ಮೂಲ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.